ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 3–11–2014

## ಪತ್ರಿಕಾ ಪ್ರಕಟಣೆ

## ಡಾ: ರಾಜ್‌ಕುಮಾರ್ ಸ್ಮಾರಕ ಲೋಕಾರ್ಪಣೆ : ಪ್ರಸಾರ ಹಕ್ಕುಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)

ಕನ್ನಡದ ಮೇರುನಟ ಹಾಗೂ ದಾದಾಸಾಹೇಬ್ ಪಾಲ್ಕೆ ಪ್ರಶಸ್ತಿ ವಿಜೇತರಾದ ಡಾ|| ರಾಜ್‌ಕುಮಾರ್‌ರವರು ಸುದೀರ್ಘ ಚಲನಚಿತ್ರ ಬದುಕಿನಲ್ಲಿ ಕನ್ನಡ ಭಾಷೆಯಲ್ಲಿ ಅಭಿನಯಿಸಿದ ಏಕೈಕ ನಾಯಕ ನಟರು. ಕನ್ನಡ ನಾಡಿನ ಸಾಂಸ್ಕೃತಿಕ ರಾಯಭಾರಿಯಾಗಿದ್ದ ಅವರು ಕನ್ನಡ ಚಲನಚಿತ್ರ ರಂಗದ ಬೆಳವಣಿಗೆಗೆ ಮತ್ತು ಕನ್ನಡ ಚಿತ್ರರಂಗವು ಕರ್ನಾಟಕದಲ್ಲಿಯೇ ನೆಲೆಯೂರಲು ಮೂಲ ಕಾರಣಕರ್ತರು. ಇಂತಹ ಮಹಾನ್ ಕಲಾಭಿಮಾನಿಯ ಸಲ್ಲಿಸಿರುವ ಕೊಡುಗೆಯನ್ನು ಚಿರಸ್ಥಾಯಿಯಾಗಿಸಲು ಕರ್ನಾಟಕ ಸರ್ಕಾರ ಡಾ|| ರಾಜ್‌ಕುಮಾರ್ ಸ್ಮಾರಕವನ್ನು ನಿರ್ಮಿಸಿ ಸ್ಮಾರಕದ ಲೋಕಾರ್ಪಣೆ ಸಮಾರಂಭವನ್ನು ದಿನಾಂಕ: 29–11–2014ರಂದು ಏರ್ಪಡಿಸಲಾಗಿದೆ.

ಈ ಲೋಕಾರ್ಪಣೆ ಸಮಾರಂಭಕ್ಕೆ ಚಲನಚಿತ್ರ ಖ್ಯಾತ ನಟರಾದ ಶ್ರೀ ಅಮಿತಾಭ್ ಬಚ್ಚನ್, ಶ್ರೀ ರಜನೀಕಾಂತ್, ಶ್ರೀ ಚಿರಂಜೀವಿ, ಶ್ರೀ ಮುಮ್ಮುಟಿ, ಶ್ರೀ ಕಮಲಹಾಸನ್ ಹಾಗೂ ಶ್ರೀ ಮೋಹನ್‌ಲಾಲ್ , ಇವರುಗಳನ್ನು ಸಮಾರಂಭದ ಮುಖ್ಯ ಅತಿಥಿಗಳಾಗಿ ಆಹ್ವಾನಿಸಲಾಗಿದೆ. ಡಾ|| ರಾಜ್‌ಕುಮಾರ್ ಸ್ಮಾರಕವನ್ನು ಅಂದು ಬೆಳಗ್ಗೆ ಲೋಕಾರ್ಪಣೆಗೊಳಿಸಿ ಸಂಜೆ ಬೆಂಗಳೂರು ಅರಮನೆ ಆವರಣದಲ್ಲಿ ಮನರಂಜನಾ ಕಾರ್ಯಕ್ರಮವನ್ನು ಏರ್ಪಡಿಸಿದೆ.

ಈ ಮನರಂಜನಾ ಕಾರ್ಯಕ್ರಮದಲ್ಲಿ ಡಾ|| ರಾಜ್‌ಕುಮಾರ್ ಅಭಿನಯದ ಗೀತೆ, ನೃತ್ಯ ಕಾರ್ಯಕ್ರಮಗಳನ್ನು ಖ್ಯಾತ ನಟ ನಟಿಯರು ಪ್ರದರ್ಶಿಸಲಿದ್ದಾರೆ. ಈ ಮನರಂಜನಾ ಕಾರ್ಯಕ್ರಮವನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಸಹಭಾಗಿತ್ವದಲ್ಲಿ ಏರ್ಪಡಿಸಲಾಗಿದೆ. ಮನರಂಜನಾ ಕಾರ್ಯಕ್ರವನ್ನು ವಾಹಿನಿಗಳಲ್ಲಿ ನೇರ ಪ್ರಸಾರ ಮಾಡುವ ಹಕ್ಕನ್ನು ಪಡೆಯಲು ಟಿವಿ ಚಾನೆಲ್‌ಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತರು ತಮ್ಮ ಸಂಸ್ಥೆಯ ಪೂರ್ಣ ವಿವರಗಳೊಂದಿಗೆ ದಿನಾಂಕ: 10–11–2014ರ ಸಂಜೆ 4.00 ಒಳಗೆ ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಕ್ರೆಸೆಂಟ್ ರಸ್ತೆ, ಬೆಂಗಳೂರು ಇವರಿಗೆ ಸಲ್ಲಿಸುವಂತೆ ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯನ್ನು ಸಂಪರ್ಕಿಸಬಹುದು ಅಧಿಕೃತ ಪ್ರಕಟಣೆ ತಿಳಿಸಿದೆ.

ಸಹನಾ/ಕೆಎಂ

Drawing Competition on Nature Awareness and Adventure 2014

Bangalore, November 3(Karnataka Information)

Lal Bahadur Mountaineering Institute is organizing drawing competition on Nature Awareness and Adventure, M£À On Saturday the 8th November 2014 for the students of primary to high school, from 9-30 a.m.. Entry is free. In this connection, the heads of the institutions may kindly register their institutions through Secretary's Mobile No. 9341822000. Venue: Dr. Rajkumar Glasshouse Auditorium, BBMP-Headquqrters, JC road, Bangalore-560 001.

sahana/km/

## ನವೆಂಬರ್ 14 ರಿಂದ 20 ರವರೆಗೆ ಅಂತರರಾಷ್ಟ್ರೀಯ ಮಕ್ಕಳ ಚಲನ ಚಿತ್ರೋತ್ಸವ

**ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)**

ರಾಜ್ಯಾದ್ಯಂತ ನವೆಂಬರ್ 14 ರಿಂದ 20 ರವರೆಗೆ ಆಯೋಜಿಸಲಾಗಿರುವ ಅಂತರರಾಷ್ಟ್ರೀಯ ಮಕ್ಕಳ ಚಲನ ಚಿತ್ರೋತ್ಸವವನ್ನು ನವೆಂಬರ್ 13 ರಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಅಂಬೇಡ್ಕರ್ ಭವನದಲ್ಲಿ ಚಲನಚಿತ್ರೋತ್ಸವವನ್ನು ಉದ್ಘಾಟಿಸಲಿದ್ದು, ಖ್ಯಾತ ನಟ ಅರ್ಜುನ್ ಸರ್ಜಾ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆಂದು ವಾರ್ತಾ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಜ್ ಸಚಿವರಾದ ಶ್ರೀ ಅರ್. ರೋಷನ್ ಬೇಗ್ ಅವರು ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಚಲನಚಿತ್ರ ಅಕಾಡೆಮಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ

ಏರ್ಪಡಿಸಲಾಗಿರುವ ಕರ್ನಾಟಕ ಅಂತರರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವದ ಕುರಿತು ವಾರ್ತಾ ಇಲಾಖೆಯಲ್ಲಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಸಚಿವರು ಮಾಹಿತಿ ನೀಡಿದರು.

ಭಾರತ ಸೇರಿದಂತೆ ವಿವಿಧ ದೇಶಗಳಿಂದ ಸಾಮಾಜಿಕ, ಶೈಕ್ಷಣಿಕ, ಸಾಹಸ, ಲಿಂಗ ತಾರತಮ್ಯ ಬುದ್ದಿವಿಕಸನ ಇವೇ ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲುವಂತಹ 15 ಚಲನಚಿತ್ರಗಳನ್ನು ಈ ಚಿತ್ರೋತ್ಸವಕ್ಕೆ ಆಯ್ಕೆ ಮಾಡಲಾಗಿದ್ದು, 30 ಜಿಲ್ಲೆಗಳಲ್ಲಿ ಒಂದೇ ಬಾರಿಗೆ ಒಂದೇ ಸಮಯದಲ್ಲಿ ಉಪಗ್ರಹ ಮೂಲಕ ಪ್ರದರ್ಶನ ಮಾಡಲು ವ್ಯವಸ್ಥೆ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ರಾಷ್ಟ್ರದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಸರ್ಕಾರದ ವತಿಯಿಂದ ಅಂತರರಾಷ್ಟ್ರೀಯ ಮಕ್ಕಳ ಚಲನ ಚಿತ್ರೋತ್ಸವವನ್ನು ಆಯೋಜಿಸಲಾಗುತ್ತಿದ್ದು, ಚಲನಚಿತ್ರೋತ್ಸವದ ನಂತರ ಬರುವ ಪ್ರತಿಕ್ರಿಯೆಯನ್ನು ಆಧರಿಸಿ ಮುಂದಿನ ಬಾರಿ ಚಲನ ಚಿತ್ರೋತ್ಸವವನ್ನು ಇನ್ನೂ ವಿಸ್ತೃತವಾಗಿ ಆಯೋಜಿಸಲಾಗುವುದೆಂದು ಸಚಿವರು ತಿಳಿಸಿದರು.

ಡಿಸೆಂಬರ್ 4 ರಿಂದ 11 ರವರೆಗೆ ಆಯೋಜಿಸಲು ತೀರ್ಮಾನಿಸಲಾಗಿರುವ 7ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸದಲ್ಲಿ, 50 ದೇಶಗಳಿಂದ 150 ಸಿನಿಮಾವನ್ನು ಪ್ರದರ್ಶಿಸಿಸುವ ಜೊತೆಗೆ ವಿಚಾರ ಸಂಕಿರಣ, ವಸ್ತು ಪ್ರದರ್ಶನಗಳನ್ನು ಏರ್ಪಡಿಸಲಾಗುವುದು. ಡಿಸೆಂಬರ್ 4 ರಂದು ಉದ್ಘಾಟನೆಗೊಳ್ಳಲಿರುವ ಈ ಚಲನಚಿತ್ರೋತ್ಸವದ ಸಂಪೂರ್ಣ ಮಾಹಿತಿಯನ್ನು ಸಧ್ಯದಲ್ಲಿಯೇ ಪ್ರಕಟಿಸಲಾಗುವುದೆಂದರು.

ಸುದ್ದಿಗೋಷ್ಠಿಗೂ ಮುನ್ನ ಮಕ್ಕಳ ಚಲನ ಚಿತ್ರೋತ್ಸವವದ ಬಗ್ಗೆ ಮಾಹಿತಿ ನೀಡಿದ ವಾರ್ತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ ಶಾಲಿನಿ ರಜನೀಶ್ ಅವರು ಗ್ರಾಮೀಣ ಮಕ್ಕಳಿಗೂ ಸಿನಿಮಾವನ್ನು ತೋರಿಸುವ ಸಲುವಾಗಿ 15 ಸಿನಿಮಾಗಳಲ್ಲಿ 9 ಸಿನಿಮಾವನ್ನು ಡಿವಿಡಿ ಮಾಡಲು ಹಕ್ಕು ಪಡೆಯಲಾಗಿದ್ದು, ಜಿಲ್ಲಾಧಿಕಾರಿಗಳನ್ನೊಳಗೊಂಡ ಸಮಿತಿಯ ಮೂಲಕ ಈ ಡಿವಿಡಿ ಯನ್ನು ಜಿಲ್ಲೆಯ ಎಲ್ಲಾ ಶಾಲೆಗಳಿಗೆ, ಬಾಲಭವನಕ್ಕೆ ವಿತರಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ ಎಂದರು.

ಈ ಚಲನಚಿತ್ರೋತ್ಸವದ ಕಲಾತ್ಮಕ ನಿರ್ದೇಶಕರಾದ ವಸಂತ್‌ಮುಕಾಶಿ ಅವರು ಮಾತನಾಡಿ "ತುಂಟತನ" ಮಕ್ಕಳಲ್ಲಿ ತುಂಟತನ ಇದ್ದರೆ ಚಿಲಿಪಿಲಿ ಶಬ್ದ ಕೇಳಲು ಸಾಧ್ಯ. ತುಂಟತನದ ಜೊತೆಗೆ ಶಿಕ್ಷಣವೂ ಸಹ ಇರಬೇಕು. ಆ ದೃಷ್ಟಿ ಕೋನದಲ್ಲಿ ಸಿನಿಮಾಗಳ ಆಯ್ಕೆ ಮಾಡಲಾಗಿದೆ. ಆಯ್ಕೆಯಾಗಿರುವ ಬಹುಪಾಲು ಸಿನಿಮಾ ಮಹಿಳಾ ನಿರ್ದೇಶನದ ಸಿನಿಮಾ ಆಗಿದೆ ಎಂದರು.

ಸುದ್ಧಿಗೋಷ್ಠಿಯಲ್ಲಿ ಬೆಂಗಳೂರು ಅಂತರಾಷ್ಟ್ರೀಯ ಚಲನಚಿತ್ರ್ಯೋತ್ಸವ ಕಲಾ ನಿರ್ದೇಶಕ ಶ್ರೀ ಕೆ. ವಿದ್ಯಾಂಶಕರ್ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಶ್ರೀ ಎನ್. ಆರ್. ವಿಶುಕುಮಾರ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಶ್ರೀ ಹೆಚ್. ಡಿ. ಗಂಗರಾಜು, ನಿರ್ಮಾಪಕ ಶ್ರೀ ಸಾ.ರಾ. ಗೋವಿಂದು, ನಿರ್ದೇಶಕ ಶ್ರೀ ಎಸ್. ನಾರಾಯಣ್ ಸೇರಿದಂತೆ ಮತ್ತಿತರ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

ಸಮ:ಬಿಜಿಪಿ:ಜಿಪಿಆರ್.

# ಅಂತರರಾಷ್ಟ್ರೀಯ ಮಕ್ಕಳ ಚಲನ ಚಿತ್ರೋತ್ಸವದಲ್ಲಿ ಪ್ರದರ್ಶಿಸಲಾಗುವ ಚಲನಚಿತ್ರಗಳು

ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ

ಕರ್ನಾಟಕ ಅಂತರರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳಲಿರುವ ಸಿನಿಮಾವನ್ನು ಮಕ್ಕಳಿಗೆ ಅರ್ಥವಾಗಬೇಕೆಂಬ ಉದ್ದೇಶದಿಂದ 156 ಸಿನಿಮಾಗಳಲ್ಲಿ 6 ರಿಂದ 10 ವರ್ಷದ ಶಾಲಾ ಮಕ್ಕಳಿಗೆ 9 ಸಿನಿಮಾವನ್ನು ಹಾಗೂ 11 ರಿಂದ 16 ವರ್ಷದ ಶಾಲಾ ಮಕ್ಕಳಿಗೆ 8 ಸಿನಿಮಾವನ್ನು ತೋರಿಸಲು ಉದ್ದೇಶಿಸಲಾಗಿದೆ. ಪ್ರದರ್ಶನಗೊಳ್ಳಲಿರುವ ಸಿನಿಮಾಗಳ ವಿವರ ಇಂತಿದೆ:–

## 6 ರಿಂದ 10 ವರ್ಷದ ಮಕ್ಕಳಿಗಾಗಿ ಪ್ರದರ್ಶಿತವಾಗುವ ಸಿನಿಮಾಗಳು :

1) ಬ್ರೆಜೀಲ್ ದೇಶದ ರೊಸಾನೆ ಸ್ವರ್ತ್‌ಮನ್ ನಿರ್ದೇಶನದ "ಚೈನಾ"

2) ಮಂಗೋಲಿಯಾದ ಕೋರೋಲ್ ದೋರ್ಜ್ ನಿರ್ದೇಶನದ "ಯಲೊ ಕೊಲ್ಟ್"

3) ಝೆಕ್ ರಿಪಬ್ಲಿಕ್‌ನ ವೆರಾ ಸಿಂವೊಕ ನಿರ್ದೇಶನದ "ಪನಿ ಕ್ಲುಕಿ"

4) ಝೆಕ್ ರಿಪಬ್ಲಿಕ್‌ನ ಪೀಟರ್ ಔಕ್ರೋಪೆಕ್ ನಿರ್ದೇಶನದ "ಬ್ಲೂ ಟೈಗರ್"

5) ಝೆಕ್ ರಿಪಬ್ಲಿಕ್‌ನ ಕರೆಲ್ ಝೆಮಾನ್ ನಿರ್ದೇಶನದ " ಜರ್ನಿ ಆಫ್ ದಿ ಬಿಗಿನಿಂಗ್ ಆಫ್ ಟೈಮ್"

6) ಭಾರತದ ಶಿಲ್ಪಾ ರಾನಡೆ ನಿರ್ದೇಶನದ "ಗೂಪಿ ಗವ್ವಯ್ಯ ಬಾಘ ಬಜ್ಜಯ್ಯ"

7) ಅಮೆರಿಕಾದ ಎಲೆನಾರ್ ಲಿಂಡೊ ನಿರ್ದೇಶನದ "ಟಚಿಂಗ್ ವೈಲ್ಡ್ ಹಾರ್ಸಸ್"

8) ಭಾರತದ ಬತುಲ್ ಮುಕ್ತಿಯಾರ್ ನಿರ್ದೇಶನದ "ಕಫಲ್"

9) ಭಾರತದ ಹಿರೇನ್ ಬೋರಾ ನಿರ್ದೇಶನದ "ಖೋಬ್"

## 11 ರಿಂದ 16 ವರ್ಷದ ಮಕ್ಕಳಿಗಾಗಿ ಪ್ರದರ್ಶಿತವಾಗುವ ಸಿನಿಮಾಗಳು :

1) ಚೈನಾದ ರಿಚರ್ಡ್ ಬೊವೆನ್ ನಿರ್ದೇಶನದ "ಸಿಂಡ್ರೆಲ್ಲಾ ಮೂನ್"

2) ಇರಾನ್‌ನ ಮಾಜಿದ್ ಮಾಜಿದ್ ನಿರ್ದೇಶನದ "ಚಿಲ್ಡ್ರನ್ ಆಫ್ ಹೆವೆನ್"

3) ಹಂಗೇರಿಯ ಝಾಲ್ಟ್ ಬರ್ನಾತ್ ನಿರ್ದೇಶನದ "ಇನ್ ದ ನೇಮ್ ಆಫ್ ಶರ್ಲಾಕ್ ಹೋಮ್ಸ್"

4) ಸ್ವಿಟ್ಜರ್‌ಲ್ಯಾಂಡ್‌ದ ಟೋಬಿಯಾಸ್ ಇನೆಚೆನ್ ನಿರ್ದೇಶನದ "ಕ್ಲಾರಾ ಅಂಡ್ ದಿ ಸಿಕ್ರೆಟ್ ಆಫ್ ದಿ ಬಿಯರ್ಸ್

5) ಝೆಕ್ ರಿಪಬ್ಲಿಕ್‌ನ ಕರೆಲ್ ಝಮಾನ್ ನಿರ್ದೇಶನದ "ಜರ್ನಿ ಆಫ್ ದಿ ಬಿಗಿನಿಂಗ್ ಆಫ್ ಟೈಮ್

6) ಗ್ರೀನ್‌ಲ್ಯಾಂಡ್‌ನ ಮೈಕ್ ಮ್ಯಾಗಿಡ್ಸನ್ ನಿರ್ದೇಶನದ "ಇನುಕ್"

7) ಭಾರತದ ಪೃಥ್ವಿ ಕೊಣನೂರ್ ನಿರ್ದೇಶನದ "ಅಲೆಗಳು"

8) ಭಾರತದ ಹಿರೇನ್ ಬೋರಾ ನಿರ್ದೇಶನದ "ಖೋಬ್"

ಸಮ:ಬಿಜಿಪಿ:ಜಿಪಿಆರ್.

# ಅಸಂಘಟಿತ ಕಾರ್ಮಿಕರಿಗೆ ಪಿಂಚಣಿ ಸೌಲಭ್ಯ

**ಬೆಂಗಳೂರು, ನವೆಂಬರ್ ೩ (ಕರ್ನಾಟಕ ವಾರ್ತೆ)**

ಅಸಂಘಟಿತ ಕಾರ್ಮಿಕರಿಗೆ ವೃದ್ಧಾಪ್ಯದ ಸಮಯದಲ್ಲಿ ಆರ್ಥಿಕ ಭದ್ರತೆ ಒದಗಿಸಿ ಪಿಂಚಣಿ ಸೌಲಭ್ಯದ ಲಾಭ ಒದಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು " ಎನ್.ಪಿ.ಎಸ್. ಲೈಟ್–ಸ್ವಾವಲಂಬನ್" ಎಂಬ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದೆ.

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕ ಇಲಾಖೆಯು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಸರ್ಕಾರವು ಗುರುತಿಸಿರುವ ೪೩ ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರ ಭದ್ರತೆಗಾಗಿ ಈ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ. ಅಸಂಘಟಿತ ಕಾರ್ಮಿಕರು ಪಾವತಿಸುವ ವಂತಿಕೆಗೆ ಅನುಗುಣವಾಗಿ ರಾಜ್ಯ ಸರ್ಕಾರದಿಂದ ಗರಿಷ್ಠ ರೂ ೧೨೦೦/– ಗಳ ಸಮಾನಾಂತರ ವಂತಿಗೆ ದೊರೆಯುತ್ತದೆ. ಹಾಗೆಯೇ ಫಲಾನುಭವಿಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ

ಪಂಗಡದವರಾಗಿದ್ದಲ್ಲಿ ಅಂತಹ ವಂತಿಗೆದಾರರ ಖಾತೆಗೆ ವಾರ್ಷಿಕ ಗರಿಷ್ಠ ರೂ 2400/- ರ ಮಿತಿಗೊಳಪಟ್ಟು ವಂತಿಗೆಯ ಎರಡರಷ್ಟು ಹಣವನ್ನು ಸಮಾನಾಂತರ ವಂತಿಗೆಯಾಗಿ ರಾಜ್ಯ ಸರ್ಕಾರವು ಪಾವತಿಸುತ್ತದೆ. ಇದರ ಜೊತೆಗೆ ಆರ್ಥಿಕ ವರ್ಷದಲ್ಲಿ ಕನಿಷ್ಠ ರೂ 1000/- ಪಾವತಿಸುವ ವಂತಿಗೆದಾರರ ಪ್ರಾನ್ ಖಾತೆಗೆ ಕೇಂದ್ರ ಸರ್ಕಾರವು ಸಹ ಸ್ವಾವಲಂಬನ್ ಯೋಜನೆಯಿಂದ ರೂ 1000/- ಸಹವಂತಿಗೆ ಜಮಾ ಮಾಡುತ್ತದೆ.

18 ರಿಂದ 60 ವರ್ಷ ವಯಸ್ಸಿನ ಅಸಂಘಟಿತ ಕಾರ್ಮಿಕರು ಈ ಯೋಜನೆಯ ಸೌಲಭ್ಯಕ್ಕೆ ಅರ್ಹರು. ಸಂಗ್ರಹವಾದ ವಂತಿಗೆ ಮೊತ್ತವನ್ನು ಸರ್ಕಾರಿ ಬಾಂಡ್‌ಗಳಲ್ಲಿ ಮತ್ತು ಷೇರುಗಳಲ್ಲಿ ತೊಡಗಿಸಿ ಫಲಾನುಭವಿಯು 60 ವರ್ಷ ಪೂರೈಸಿದಾಗ ಖಾತೆಯಲ್ಲಿ ಸಂಗ್ರಹವಾದ ಒಟ್ಟು ಮೊತ್ತದ ಆಧಾರದಿಂದ ಪಿಂಚಣಿಯನ್ನು ನಿರ್ಧರಿಸಲಾಗುತ್ತದೆ.

ಈ ಸೌಲಭ್ಯವು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ನೋಂದಣಿ ಮಾಡಿಕೊಂಡಲ್ಲಿ ಮಾತ್ರ ಕೇಂದ್ರ ಸರ್ಕಾರದ ಸಹವಂತಿಗೆ ಜೊತೆಗೆ ರಾಜ್ಯ ಸರ್ಕಾರದ ವಂತಿಗೆಯು ಸಹ ದೊರೆಯುತ್ತದೆ. ವಂತಿಗೆದಾರರು ಯೋಜನೆಯಲ್ಲಿ ತೊಡಗಿಸುವ ಸಂಪೂರ್ಣ ಹಣಕ್ಕೆ ಪ್ರಾನ್ ಖಾತೆಯನ್ನು ತೆರೆಯಲಾಗುತ್ತಿದ್ದು, ಇದಕ್ಕಾಗಿ ಯಾವುದೇ ರೀತಿಯ ವೆಚ್ಚವನ್ನು ವಂತಿಗೆದಾರರಿಂದ ವಸೂಲಿ ಮಾಡುತ್ತಿಲ್ಲ. ನಿವೃತ್ತಿ ಸಮಯದಲ್ಲಿ ಆರ್ಥಿಕ ಭದ್ರತೆ ಒದಗಿಸುವ ಇಂತಹ ಮಹಾತ್ವಾಂಕ್ಷೆಯ ಯೋಜನೆಯ ಸೌಲಭ್ಯವನ್ನು ಅಸಂಘಟಿತ ವಲಯದ ಕಾರ್ಮಿಕರು ಪಡೆದುಕೊಳ್ಳಬಹುದಾಗಿದೆ.

ಆದರೆ, ಇತ್ತೀಚೆಗೆ ಕೆಲವೊಂದು ಅನಧಿಕೃತ ಸಂಸ್ಥೆಗಳೂ ಮಂಡಳಿಯ ಹೆಸರನ್ನು ಉಪಯೋಗಿಸಿಕೊಂಡು ವಿವಿಧ ಸೌಲಭಗಳನ್ನು ಒದಗಿಸುವ ಸುಳ್ಳು ಆಶ್ವಾಸನೆಗಳನ್ನು ನೀಡಿ ಸಾರ್ವಜನಿಕರಿಂದ ಹೆಚ್ಚಿನ ಹಣ ಸಂಗ್ರಹಿಸಿ ಕನಿಷ್ಠ ಪಾವತಿಸಬೇಕಾದ ಕೇವಲ ರೂ 100/- ಗಳನ್ನು ಮಾತ್ರ ಪ್ರಾನ್ ಖಾತೆಗೆ ಪಾವತಿಸಿ ಪ್ರಾನ್ ಕಾರ್ಡ್ ನೀಡಿ ಉಳಿದ ಹಣವನ್ನು ಫಲಾನುಭವಿಯ ಖಾತೆಗೆ ಜಮಾ ಮಾಡದೆ ಅವರನ್ನು ವಂಚಿಸುತ್ತಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಒಂದು ವೇಳೆ ಇಂತಹ ಅನಧಿಕೃತ ಸಂಸ್ಥೆಗಳು ಕಂಡುಬಂದಲ್ಲಿ ಅವರ ವಿವರಗಳನ್ನು ಸಾರ್ವಜನಿಕರು ಈ ಕಚೇರಿಗೆ ಲಿಖಿತವಾಗಿ ದೂರು ಸಲ್ಲಿಸುವ ಮೂಲಕ ಇಂತಹ ಸಂಸ್ಥೆಗಳ ಮೋಸಗಳನ್ನು ತಡೆಯುವಲ್ಲಿ ಮಂಡಳಿಯೊಂದಿಗೆ ಸಹಕರಿಸಬೇಕೆಂದು ಕೋರಿದೆ. ಈ ರೀತಿಯಲ್ಲಿ ಯಾವುದೇ ಅಸಂಘಟಿತ ಕಾರ್ಮಿಕರು ಅನಧಿಕೃತ ಸಂಸ್ಥೆಗಳ ಮೂಲಕ ಮೋಸ ಹೋಗದೆ,

ಯೋಜನೆಯಡಿ ನೋಂದಾಯಿಸಿಕೊಳ್ಳಬಯಸುವ ಅಸಂಘಟಿತ ಕಾರ್ಮಿಕರು ಮುನ್ನಚರಿಕೆ ವಹಿಸಿ, ಜಾಗ್ರತವಾಗಿ ಮಂಡಳಿಯಿಂದ "ಫೆಸಿಲಿಟೇಟರ್" ಗಳಾಗಿ ನೇಮಿಸಲ್ಪಟ್ಟ ಈ ಕೆಳಕಂಡ ಯಾವುದಾದರೂ ಸಂಸ್ಥೆಯನ್ನು ಮಾತ್ರ ಸಂಪರ್ಕಿಸಿ ಯೋಜನೆಯ ಸಂಪೂರ್ಣ ಲಾಭವನ್ನು ಪಡೆದುಕೊಳ್ಳುವಂತೆ ಎಲ್ಲ ಅಸಂಘಟಿತ ವಲಯದ ಕಾರ್ಮಿಕರಿಗೆ ಈ ಮೂಲಕ ಮನವಿ ಮಾಡಲಾಗಿದೆ.

ಮೆ: ಅಲಂಕಿತ ಆಸೈನ್‌ಮೆಂಟ್ಸ್ ಲಿ., (ದೂರವಾಣಿ – 40195723/33), ಮೆ:. ಐಎಲ್ & ಎಫ್ ಎಸ್. ಸೆಕ್ಯೂರಿಟಿಸ್ ಸರ್ವಿಸಸ್ ಲಿ., (ದೂರವಾಣಿ – ಮೆ: ವೇ 2 ವೆಲ್ತ್, ಬ್ರೋಕರ್ಸ್ ಪ್ರೈ. ಲಿ., (ಎ ಕಾಫೀ ಡೇ ವೆಂಚರ್) (ಟೋಲ್ ಫ್ರೀ ನಂ : 1800 425 3690 ದೂರವಾಣಿ – 080 – 43676869) ಮೆ: ಇನ್‌ಸ್ಟಿಟ್ಯೂಟ್ ಫಾರ್ ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಅಂಡ್ ರಿಸರ್ಚ್ (ಐಎಫ್‌ಎಂಆರ್) (ದೂರವಾಣಿ : 080 – 41656657) ಮೆ: ಇನ್‌ಸ್ಟೊಟ್ಯೂಟ್ ಆಫ್ ಇಂಡಿಯ ಮೈಕ್ರೋ ಸಿಸ್ಟಮ್ ಪ್ರೈ. ಲಿ., (ಐಐಎಂಪಿಎಸ್) (ದೂರವಾಣಿ : 080 – 23014545)

ಯೋಜನೆಯ ಹೆಚ್ಚಿನ ವಿವರಗಳಿಗಾಗಿ ಮತ್ತು ಅನಧಿಕೃತ ಸಂಸ್ಥೆಗಳು ಕಂಡುಬಂದಲ್ಲಿ ಸಾರ್ವಜನಿಕರು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಕಾರ್ಮಿಕ ಭವನ, ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 029, ದೂರವಾಣಿ ಸಂಖ್ಯೆ 080–26631583/4 ವಿಳಾಸವನ್ನು ಸಂಪರ್ಕಿಸಬಹುದಾಗಿದೆ.

ಸಮ:ಬಾಬು:ಜಿಪಿಆರ್.

## ವನ್ಯಜೀವಿ ಚಿತ್ರಕಲಾ ಸ್ಪರ್ಧೆ

**ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)**

ಲಾಲ್‌ಬಹದ್ದೂರ್ ಮೌಂಟನಿಯರಿಂಗ್ ಸಂಸ್ಥೆ ವತಿಯಿಂದ ಬೆಂಗಳೂರು ನಗರದ ಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ – 2014 ದಿನಾಂಕ 8–11–2014 ರ ಶನಿವಾರದಂದು ಬೆಳಿಗ್ಗೆ 9–30 ಗಂಟೆಗೆ ಡಾ. ರಾಜಕುಮಾರ್ ಗಾಜಿನ ಸಭಾಂಗಣ, ಬಿಬಿಎಂಪಿ ಪ್ರಧಾನ ಕಚೇರಿ, ಜೆ.ಸಿ. ರಸ್ತೆ, ಬೆಂಗಳೂರು ಇಲ್ಲಿ ವನ್ಯಜೀವಿ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಈ ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ ಯಾವುದೇ ನೋಂದಣಿ ಶುಲ್ಕವಿರುವುದಿಲ್ಲ. ಶಾಲೆಯ ಮುಖ್ಯೋಪಾಧ್ಯಾಯರುಗಳು ತಮ್ಮ ಶಾಲೆಯ ವಿದ್ಯಾರ್ಥಿಗಳನ್ನು ಭಾಗವಹಿಸುವಂತೆ ಆದೇಶ ನೀಡಲು ಕೋರಲಾಗಿದೆ. ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರತಿಯೊಬ್ಬರಿಗೂ ಡ್ರಾಯಿಂಗ್ ಶೀಟ್ ಅನ್ನು ಒದಗಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ ಮೊಬೈಲ್ 9341822000 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಶ್ರೀ ಕೆ.ವಿ.ಆರ್. ಠ್ಯಾಗೋರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮ:ಬಾಬು:ಜಿಪಿಆರ್.

# ಹಿಮಾಚಲ ಪ್ರದೇಶ ಮುಖ್ಯಮಂತ್ರಿ ರಾಜ್ಯ ಭೇಟಿ

**ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)**

ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಶ್ರೀ ವೀರಭದ್ರ ಸಿಂಗ್ ಅವರು ಬೆಂಗಳೂರಿಗೆ ನವೆಂಬರ್ 7 ರಂದು ಬೆಂಗಳೂರಿಗೆ ಭೇಟಿ ನೀಡಿ ವಾಣಿಜ್ಯೋಮಿಗಳೊಂದಿಗೆ ಹಿಮಾಚಲ ಪ್ರದೇಶದಲ್ಲಿ ಬಂಡವಾಳ ಹೂಡಿಕೆ ಬಗ್ಗೆ ಚರ್ಚಿಸುವರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಜೋಗ್‌ಕಾರ್ಗಲ್ ಪಟ್ಟಣ ಪಂಚಾಯತಿ ಚುನಾವಣೆ

**ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)**

ರಾಜ್ಯ ಚುನಾವಣಾ ಆಯೋಗವು ಶಿವಮೊಗ್ಗ ಜಿಲ್ಲೆ ಜಿಲ್ಲೆ ಜೋಗ್‌ಕಾರ್ಗಲ್ ಪಟ್ಟಣ ಪಂಚಾಯತಿ 11 ವಾರ್ಡುಗಳಿಗೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಅದರನ್ವಯ ನವೆಂಬರ್ 17 ರಂದು ಜಿಲ್ಲಾಧಿಕಾರಿಗಳು ಅಧಿಸೂಚನೆಯನ್ನು ಹೊರಡಿಸಲಿದಾರೆ. ಅಂದಿನಿಂದಲೇ ನೀತಿ ಸಂಹಿತೆ ಜಾರಿಗೆ ಬರಲಿದೆ. ಮತದಾನವು ಡಿಸೆಂಬರ್ 5 ರಂದು ನಡೆಯಲಿದ್ದು ಡಿಸೆಂಬರ್ 8 ರಂದು ಮತ ಎಣಿಕೆ ನಡೆಯಲಿದೆ ಎಂದು ರಾಜ್ಯ ಚುನಾವಣಾ ಆಯೋಗದ ಪ್ರಕಟಣೆ ತಿಳಿಸಿದೆ.

Photos; DSC_0650 AND DSC_0655

It's a old and Genuine Demand !

Karnataka Minister for Higher Education And Tourism, Mr R V Deshpande and Special Representative to the Government of Karnataka in New Delhi, Mr Appaji C S Nada Gouda called on the Union Minister for Railways,Mr D V Sadananda Gowda in New Delhi on

November-03. and appealed the Union Minister to take necessary action to start Ankola- Hubli Railway Project, which is awaiting Environmental clearance from the Union Government. And Also appealed to start passenger train between Hubli And Dandeli to help the people of the region.